ಶ್ರೀ ಎಸ್. ಸುರೇಶ್ ಕುಮಾರ್ : ನಾನು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಖಾಸಗೀಕರಣಕ್ಕೆ ಒಪ್ಪಿ ಒಬ್ಬರು ಸಿಂಗಪೂರಿನ ಪಾರ್ಟಿ ಬಂದಿದ್ದಾರೆ. ಒಂದು ಕೋಟಿ ರೂಪಾಯಿ ಡಿಪಾಸಿಟ್ ಇಡಬೇಕು ಎಂದು ಹೇಳಿದರು. ಸರ್ಕಾರ ಖಾಸಗೀಕರಣದ ಆ ಪಾರ್ಟಿಯ ಜೊತೆಗೆ ಏನಾದರೂ ಮಾತುಕತೆ ಮುಂದುವರೆಸಿದ್ದಾರಾ? ಅದೊಂದು ಪ್ರಶ್ನೆಗೆ ಉತ್ತರ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಟೆಮ್ಮಾಕ್ ಎಂಬ ಒಂದು ಸಂಸ್ಥೆ, ಅವರು ಖರೀದಿ ಮಾಡಲಿಕ್ಕೆ ಬಂದಿಲ್ಲ. ಅವರು ಕನ್ಸಲ್‌ಟೆಂಟ್ಸ್ ಇದ್ದ ಹಾಗೆ. ಅವರು ಒಂದು ಕೋಟಿ ರೂಪಾಯಿ ಜಮಾ ಮಾಡಿಲ್ಲ, ಅಥವಾ ಒಂದು ರೂಪಾಯಿ ಇನ್‌ವೆಸ್ಟ್ ಮಾಡಿಲ್ಲ. ಆದರೆ ಪುನಃ ಅವರು ವೈಂಡಿಂಗ್ ಅಪ್ ಆದ ನಂತರ ದಿನಾಂಕ 24ಕ್ಕೆ ಬಂದು ಒಂದು ಪ್ರಪೋಸಲ್ ಕೊಟ್ಟಿದ್ದಾರೆ. ನಾವು ಅವರ ಜೊತೆ ಮಾತುಕತೆ ಮಾಡುತ್ತಿದ್ದೇವೆ.

## ದಿನಾಂಕ 11.11.2000ರಂದು ಸಂಜೆ ರಾಣೆಬೆನ್ನೂರಿನಲ್ಲಿ ನಡೆದ ಕೋಮು ಗಲಭೆ ಕುರಿತು

ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಅಧ್ಯಕ್ಷರೆ, ದಿನಾಂಕ 11.11.2000ದಂದು ಸಂಜೆ ರಾಣೆಬೆನ್ನೂರಿನಲ್ಲಿ ಒಂದು ಘಟನೆ ನಡೆದಿದೆ. ಇದು ಬಹಳ ವಿಷಾದನೀಯವಾದಂತಹ ವಿಷಯ. ರಾಣೆಬೆನ್ನೂರು ನಗರ ನನ್ನ ರಾಜಕೀಯ ಅನುಭವದ ಪ್ರಕಾರ ಸುಮಾರು 30 ವರ್ಷಗಳಿಂದ ಅತ್ಯಂತ ಶಾಂತಿಪ್ರಿಯವಾದುದು. ಆ ಶಾಂತಿ ಪ್ರಿಯವಾದಂತಹ ಆ ಜಾಗದಲ್ಲಿ ಒಮ್ಮಿಂದ ಒಮ್ಮೆಗೆ ಸ್ವಲ್ಪ ಕೋಮು ಪ್ರಚೋದಿತವಾದಂತಹ ಗಲಭೆ ನಡೆದಿದ್ದು ಬಹಳ ವಿಷಾದನೀಯ ಎನ್ನತಕ್ಕ ಮಾತನ್ನು ಹೇಳುತ್ತೇನೆ. ದಿನಾಂಕ 11.11.2000ದಂದು ಸಂಜೆ 7.30ಕ್ಕೆ ಒಮ್ಮಿಂದ ಒಮ್ಮೆಗೇ ವಿವಾದಾಸ್ಪದ ಸ್ಥಳಕ್ಕೆ ಸಂಬಂಧಿಸಿದಂತೆ ಎರಡು ಕೋಮುಗಳ ನಡುವೆ ಗದ್ದಲ ಉಂಟಾಯಿತು. ಅದು ವಿಕೋಪಕ್ಕೆ ಹೋಗಿ ಪರಿಸ್ಥಿತಿ ಉದ್ರಿಕ್ತವಾಯಿತು. ಪೋಲೀಸರು ಸಹಿತ ಸರಿಯಾದ ವೇಳೆಗೆ ಬೆಳಿಗ್ಗೆ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನ ಮಾಡಿದ್ದಾರೆ. ಹತೋಟಿಗೆ ತರುವ ಪ್ರಯತ್ನದಲ್ಲಿ ಅನಿವಾರ್ಯವಾಗಿ ಲಾಠಿ ಛಾರ್ಜ್ ಮಾಡತಕ್ಕ ಪರಿಸ್ಥಿತಿ ಬಂದಿದೆ. ಅಶ್ರುವಾಯುಗಳನ್ನು ಸಿಡಿಸತಕ್ಕ ಪರಿಸ್ಥಿತಿ ಬಂದಿದೆ. ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸತಕ್ಕ ಪರಿಸ್ಥಿತಿಯೂ ಬಂದಿದೆ. ಮತ್ತು ಈ ಸುದ್ದಿ ತಿಳಿದ ಕೂಡಲೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಅಲ್ಲೇ ವಾಸ್ತವ್ಯವನ್ನು ಹೂಡಿದ್ದಾರೆ. ಮತ್ತು ಬೆಳಗಾವಿಯಿಂದ ಐಜಿ ಅವರು ಸಹ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಈ ಗಲಭೆಯಲ್ಲಿ ಯಾವುದೇ ಪ್ರಾಣ ಹಾನಿ ಆಗಿಲ್ಲ ಎನ್ನತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಒಂದು ಮೋಟಾರ್ ಸೈಕಲ್ ಮತ್ತು ಒಂದೆರಡು ಶೆಡ್ಡುಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ ಎನ್ನತಕ್ಕ ವಿಷಯ ನನ್ನ ಗಮನಕ್ಕೆ ಬಂದಿದೆ. ಪುನಃ ದಿನಾಂಕ 12ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಶಾಂತಿ ಸಮಿತಿಯನ್ನು ಕರೆದು ಸಾರ್ವಜನಿಕರಿಗೆ ಇದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಕೊಟ್ಟು ಸುಮಾರು 3 ತಿಂಗಳವರೆಗೆ ಶಾಂತಿಯನ್ನು ಕಾಪಾಡಿಕೊಳ್ಳಬೇಕು. ವಿವಾದಾಸ್ಪದವಾದಂತಹ ಸ್ಥಳದ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳೋಣ ಎನ್ನತಕ್ಕ ಒಂದು ನಿರ್ಣಯವನ್ನು ಜಿಲ್ಲಾಧಿಕಾರಿಗಳು

ಮಾಡಿದ್ದಾರೆ. ಪೋಲೀಸರ ಒಂದು ಜಾಣ್ಮೆಯಿಂದ ಪರಿಸ್ಥಿತಿ ಸಂಪೂರ್ಣ ಹತೋಟಿಗೆ ಬಂದಿದೆ. ಈಗ ಯಾವುದೇ ಅಂತಹ ಉದ್ರಿಕ್ತವಾದ ಪರಿಸ್ಥಿತಿ ಇವತ್ತು ಕಾಣುತ್ತಿಲ್ಲ. ನಿನ್ನೆ ಸ್ವಲ್ಪ ಕಲ್ಲು ತೂರಾಟ ಮಾಡತಕ್ಕಂಥ ಘಟನೆ ಎರಡು ಮೂರು ಕಡೆ ಆಗಿದೆ. ಈ ರೀತಿ ಆದದ್ದಕ್ಕೆ ಪೋಲೀಸರು 11ನೇ ತಾರೀಖು 14 ಜನರನ್ನು 12ನೇ ತಾರೀಖು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶಾಸಕರು ಹೇಳುತ್ತಿರುವುದನ್ನು ನೋಡಿದರೆ ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದಾರೆ ಎಂದು ಭಾವಿಸಬೇಕಾಗಿದೆ.

ಶ್ರೀ ಕೆ.ಬಿ. ಕೋಳಿವಾಡ್ : ನಾನು ಉತ್ತರ ಕೊಡುತ್ತಿಲ್ಲ. ಸದ್ಯದ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್ : ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಅವರ ಭಾಷಣವನ್ನು ಮುಗಿಸಲಿ.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್ : 12ನೇ ತಾರೀಖಿನಂದು 11 ಗಂಟೆ ಸಮಯದಲ್ಲಿ ಸುಮಾರು 14 ಜನರನ್ನು ಬಂಧಿಸಿದ್ದಾರೆ. ಅಲ್ಲಿನ ವಿವಾದಾಸ್ಪದ ಜಾಗವೊಂದರ ಬಗ್ಗೆ ಭಿನ್ನಾಭಿಪ್ರಾಯಗಳು ಬಂದಿದ್ದು, ಆ ಜಾಗದ ಮಾಲೀಕತ್ವ ಯಾರದು? ಅಥವಾ ಅದಕ್ಕೆ ಟೈಟಲ್ ಯಾರದು ಎಂದು ಹೇಳುವುದು ನಾವಾಗಲೀ, ಮತ್ತೊಬ್ಬರಾಗಲೀ, ವಿರೋಧ ಪಕ್ಷದ ನಾಯಕರಾಗಲೀ ಅಲ್ಲ. ಇದರ ಬಗ್ಗೆ ನಿರ್ಣಯಿಸುವುದಕ್ಕೆ ಅಲ್ಲೊಂದು ಜ್ಯುಡಿಷಿಯಲ್ ಕೋರ್ಟ್ ಇದೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಎನ್. ಬಚ್ಚೇಗೌಡರು ಎದ್ದು ನಿಂತು ಮಾತನಾಡಿದ್ದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಪ್ರಸ್ತಾಪಿಸಿದವರು, ಆ ಕುರಿತು ಹೇಳುವುದು ಅಪರಾಧವೇ?

ಅಧ್ಯಕ್ಷರು : ಮಧ್ಯೆ ಯಾರೂ ಕೂಡ ಅಡ್ಡಿಪಡಿಸಬಾರದು.

ಶ್ರೀ ಕೆ.ಬಿ. ಕೋಳಿವಾಡ್ : ಟೈಟಲ್ ಆಫ್ ದಿ ಪ್ರಾಪರ್ಟಿಯನ್ನು ನಿರ್ಣಯಿಸುವುದಕ್ಕೆ ಜ್ಯುಡಿಷಿಯಲ್ ಕೋರ್ಟ್‌ಗಳಿವೆ, ರೆವಿನ್ಯೂ ಕೋರ್ಟ್ ಇದೆ, ಅಲ್ಲಿ ಆ ಕುರಿತು ನಿರ್ಣಯವಾಗಬೇಕು. ಕೆಲವೇ ಗುಂಪುಗಳಿಂದ ಅಲ್ಲೊಂದು ಉದ್ರಿಕ್ತ ವಾತಾವರಣ ನಿರ್ಮಾಣವಾಗಿದೆ. ಇಲ್ಲಿ ಪಾರ್ಟಿ

ಅಥವಾ ಪಂಗಡದ ಪ್ರಶ್ನೆಯಲ್ಲ. ಕೆಲವು ಸಮಾಜ ದ್ರೋಹಿಗಳು ಜಗಳವನ್ನು ಮುದ್ದಾಂ ಸೃಷ್ಟಿಸಿ ಪರಿಸ್ಥಿತಿ ವಿಕೋಪಕ್ಕೆ ಹೋಗುವಂತೆ ಮಾಡಿದ್ದಾರೆ. ಈಗ ಪರಿಸ್ಥಿತಿ ಸಂಪೂರ್ಣ ಹತೋಟಿಯಲ್ಲಿದೆಯೆಂದು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈಗ ರಾಣೆಬೆನ್ನೂರಿನಲ್ಲಿ ನಡೆದಿರುವಂಥ ಘಟನೆ ಹಿಂದೆಂದೂ ಅಲ್ಲಿ ಆಗಿರಲಿಕ್ಕಿಲ್ಲ. ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಮತ್ತು ನರೇಗಲ್‌ನಲ್ಲಿ ನಡೆದಂಥ ಘಟನೆಗಳು ಕಾಣುತ್ತಿರುವಂತೆಯೇ ಈಗ ರಾಣೆಬೆನ್ನೂರಿನಲ್ಲೂ ನಡೆದಿದೆ. ರಾಣೆಬೆನ್ನೂರಿನಲ್ಲಿ ಸುಮಾರು ನಾಲ್ಕು ಎಕರೆಗಳಷ್ಟು ವಿವಾದಿತ ಜಾಗವಿದ್ದು, ಈ ಜಾಗದ ಬಗ್ಗೆ ಕಳೆದ ಹಲವಾರು ವರ್ಷಗಳಿಂದಲೂ ವಿವಾದಗಳು ನಡೆಯುತ್ತಿವೆ. ಅಲ್ಲಿ ಒಂದು ಕೋಮಿಗೆ ಸಂಬಂಧಿಸಿದ ಸಂಸ್ಥೆ ಇದ್ದು, ಇನ್ನೊಂದು ಕಡೆ ನಾಗರೀಕರು ಸೇರಿ ಒಂದು ಜಾಗರಣ ಸಮಿತಿ ಮಾಡಿಕೊಂಡಿದ್ದಾರೆ. ವಿವಾದಿತ ಪ್ರದೇಶ ಯಾರಿಗೆ ಸಂಬಂಧಪಟ್ಟಿದೆ ಎನ್ನುವ ಬಗ್ಗೆ ಎರಡೂ ಸಂಘಟನೆಗಳ ನಡುವೆ ವಿವಾದ ಎದ್ದಿದೆ. 2-3 ತಿಂಗಳ ಹಿಂದೆ ಆ ವಿವಾದಿತ ಪ್ರದೇಶದಲ್ಲಿ ಒಂದು ಸಂಸ್ಥೆಯವರು ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಲು ಹೋದಾಗ, ಆ ಕುರಿತು ಕೆಲವರು ಪ್ರತಿಭಟಿಸಿದಾಗ ಇದರ ಸಂಬಂಧಿಸಿದ ವಿಷಯ ಜಿಲ್ಲಾಧಿಕಾರಿ ಮತ್ತು ಎಸ್.ಪಿ.ಯವರೆಗೆ ಹೋಯಿತು. ಅನಂತರ, ಜಿಲ್ಲಾಧಿಕಾರಿಯವರು ಸಂಬಂಧಪಟ್ಟ ಉಭಯ ಪಕ್ಷದವರನ್ನು ಕರೆಸಿಕೊಂಡು ಅವರಿಂದ ಮನವಿ ಹಾಗೂ ದಾಖಲಾತಿಗಳನ್ನು ಪಡೆದುಕೊಂಡು, ಸಭೆಯಲ್ಲಿ ನಿರ್ಣಯ ಕೈಗೊಂಡು. ಈಗಾಗಲೇ ಆ ಜಾಗದಲ್ಲಿ ಕಾಂಪ್ಲೆಕ್ಸ್ ಕಟ್ಟುವ ಸಂಬಂಧ ನಿರ್ಮಾಣವಾಗಿರುವ ಅರ್ಧ ಕಟ್ಟಡವನ್ನು ಯಾರು ಕಟ್ಟಿಸಿದ್ದಾರೋ, ಅದನ್ನು ಅವರೇ ಒಡೆಸಿ ಹಾಕಬೇಕು ಮತ್ತು ವಿವಾದಿತ ಪ್ರದೇಶದ ಟೈಟಲ್ ಬಗ್ಗೆ ನಿರ್ಣಯವಾಗುವವರೆಗೆ ಅಲ್ಲಿ ಯಾವುದೇ ರೀತಿಯಾದ ಕಾರ್ಯಚಟುವಟಿಕೆಗಳನ್ನು ನಡೆಸದೆ ಯಥಾಸ್ಥಿತಿ ಕಾಯ್ದುಕೊಂಡು ಬರಬೇಕು. ಎಂದು ಅಲ್ಲಿದ್ದವರಿಗೆ ಸೂಚನೆ ಕೊಟ್ಟರು. ಇದಕ್ಕೆ ಉಭಯ ಪಕ್ಷದವರೂ ಒಪ್ಪಿಕೊಂಡರು. ನನ್ನ ಬಳಿಗೆ ಸಹ ಆ ನಿಯೋಗ ಬಂದಾಗ ನಾನು ಎಸ್.ಪಿ. ಮತ್ತು ಡಿ.ಸಿ.ಯವರೊಂದಿಗೆ ಮಾತನಾಡಿದ್ದೇನೆ. ಅಲ್ಲಿ ಹಿಂದಿನ ಎಸ್.ಪಿ. ಇದ್ದಂಥ ಸಂದರ್ಭದಲ್ಲಿ ಶಾಂತ ರೀತಿಯ ವಾತಾವರಣವಿತ್ತು ಮತ್ತು ಆ ವಿವಾದಿತ ಪ್ರದೇಶದಲ್ಲಿ ಯಾವುದೇ ಕಾರ್ಯಚಟುವಟಿಕೆಗಳು ನಡೆಯುತ್ತಿರಲಿಲ್ಲ. ಆದರೆ, ಈಗ ಹಠಾತ್ತಾಗಿ ಒಂದು ವಾರದ ಹಿಂದೆ ಒಂದು ಗುಂಪಿಗೆ ಸಂಬಂಧಿಸಿದವರು ಆ ವಿವಾದಿತ ಸ್ಥಳಕ್ಕೆ ಹೋಗಿ ಅಲ್ಲಿ ದೀಪಗಳನ್ನು ಹಚ್ಚಿ ಅಲಂಕಾರ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಾಗ ಗೊಂದಲ, ಗಲಾಟೆ ಪ್ರಾರಂಭವಾಯಿತು. ಅಲ್ಲಿ ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕೆಂದು ಜಿಲ್ಲಾಧಿಕಾರಿಯವರು ಸೂಚನೆ ಕೊಟ್ಟಾಗ್ಯೂ ಸಹ ಒಂದು ಪಂಗಡದವರು ಅಲ್ಲಿಗೆ ತೆರಳಿ ಈ ರೀತಿಯಾದ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದಾಗ ಮತ್ತೊಂದು ಕೋಮು ಅಸಹನೆಗೊಂಡು ಅದನ್ನು ತಡೆಯಲು ಹೋದಾಗ ಈ ರೀತಿಯ ಅಶಾಂತಿಯ ಘಟನೆಗಳು ನಡೆದಿವೆ. ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಉಭಯ ಪಕ್ಷದವರೂ ಪ್ರಾಮಾಣಿಕವಾಗಿ ಒಪ್ಪಿಕೊಂಡಿರುವುದನ್ನು ಉಲ್ಲಂಘಿಸಿದಂಥ ಸಂದರ್ಭದಲ್ಲಿ ಇಂತಹ ಘಟನೆ ಜರುಗುವುದಕ್ಕೆ ಅವಕಾಶವಾಯಿತು. ಇನ್ನೊಂದು ಪ್ರಮುಖವಾಗಿ ಪ್ರಸ್ತಾಪಿಸುವಂತಾದ್ದು ಏನೆಂದರೆ, ಹಾವೇರಿ ಜಿಲ್ಲೆಯಲ್ಲಿ ಈ ಮೊದಲು ಎಸ್.ಪಿ.ಯಾಗಿ ಕಾರ್ಯನಿರ್ವಹಿಸುತ್ತಿದ್ದವರನ್ನು

ನಾಲ್ಕು ದಿವಸಗಳ ಹಿಂದೆ ಬೇರೆಡೆಗೆ ವರ್ಗಾಯಿಸಿ ಅಲ್ಲಿಗೆ ಮತ್ತೊಬ್ಬ ಎಸ್.ಪಿ.ಯನ್ನು ಸರ್ಕಾರದವರು ನೇಮಿಸಿದರು. ಯಾವ ಹಿನ್ನೆಲೆಯಲ್ಲಿ ಮತ್ತೊಬ್ಬ ಎಸ್.ಪಿ.ಯನ್ನು ನೇಮಿಸಿದರು ಎಂಬುದು ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧಿಕಾರಿಗಳ ವರ್ಗಾವಣೆ ಏಕೆ ಮಾಡಿದರು ಎಂದರೆ ನಮಗೆ ಅಧಿಕಾರವಿದೆ, ವರ್ಗಾವಣೆ ಮಾಡಿದೆವು.

(ಗೊಂದಲ)

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೆ, ನಿನ್ನೆ ಏನು ನಡೆಯಿತು ಅದರ ಬಗ್ಗೆ ಮಾತ್ರ ಹೇಳಿ. ಅಧಿಕಾರಿಗಳ ವರ್ಗಾವಣೆ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ಕುರಿತ ವಿಚಾರದ ಬಗ್ಗೆ ಚರ್ಚಿಸಲು ನಮ್ಮ ಪಕ್ಷದ ವತಿಯಿಂದ ತಮಗೆ ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದು, ಚರ್ಚೆಗೆ ತಾವು ಅದನ್ನು ಮೊದಲು ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು : ತಾವು ನಿಲುವಳಿ ಸೂಚನೆ ಮೂಲಕ ಕಳುಹಿಸಿಕೊಟ್ಟಿರುವುದನ್ನು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಪರಿವರ್ತಿಸಿದ್ದೇನೆ. ತಾವು ಮಾತನಾಡಿ, ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡಿದ ಬಳಿಕ ತಾವು ಮಾತನಾಡಿ.

ಶ್ರೀ ಸಿ. ಬೈರೇಗೌಡ : ಇದು ಕ್ವೆಶ್ಚನ್ ಆಫ್ ಪ್ರೊಸೀಜರ್. ತಮಗೆ ಕಳುಹಿಸಿ ಕೊಟ್ಟಿರುವ ನಿಲುವಳಿ ಸೂಚನೆಗೆ ಸಹಿ ಮಾಡಿರುವವರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ನಿಲುವಳಿ ಸೂಚನೆಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ತಾವು ಅವಕಾಶ ಮಾಡಿಕೊಟ್ಟಿರುವುದು ಈ ನಿಮಿಷದವರೆಗೂ ನನಗಂತೂ ಗೊತ್ತಿಲ್ಲ.

ಅಧ್ಯಕ್ಷರು : ಅದನ್ನು ನಾನು ಅನೌನ್ಸ್ ಮಾಡಬೇಕಾಗಿತ್ತು. It is a fact. I do accept it.

ಶ್ರೀ ಸಿ. ಬೈರೇಗೌಡ : ಇದರ ಬಗ್ಗೆ ಮಾನ್ಯ ಸದಸ್ಯರಾದ ಕೋಳಿವಾಡ್ ಅವರಿಂದ ಉತ್ತರ ಬಂತು.

ಅಧ್ಯಕ್ಷರು : ಉತ್ತರವಲ್ಲ, ಅವರು ಶಾಸಕರಾಗಿ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ನಮ್ಮ ಸದನದ ಕಾರ್ಯಕಲಾಪಗಳು ನಿಯಮಾವಳಿ ರೀತ್ಯ ನಡೆಯಬೇಕಾಗಿದೆ. ಅದು ಸದಸ್ಯರ ಉತ್ತರವಲ್ಲ, ಸರ್ಕಾರದ ಉತ್ತರ! ಸರ್ಕಾರದ ಉತ್ತರ ಈಗ ಬಂದಿದೆ! ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದು ನಮ್ಮ ಗತಿಯೇನು? ನಮಗೆ ಈ ವಿಚಾರ ಗೊತ್ತಿಲ್ಲ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇವೆ, ಇದು ತಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ತಾವು ಮೊದಲು ಎರಡು ಪ್ರಶ್ನೆಗಳನ್ನು ಎತ್ತಿದ್ದೀರಿ. ಮೊದಲನೆಯದಾಗಿ, ಸದನದ ನಿಯಮಾವಳಿ ಪ್ರಕಾರ ನಡೆದುಕೊಳ್ಳಬೇಕೆಂಬುದು. ಇವೊತ್ತು ಸುಮಾರು ಎರಡೂವರೆ ಗಂಟೆಗಳ ಕಾಲ ಪ್ರಶ್ನೋತ್ತರ ಕಾಲ ಜರುಗಿತು. ನಾವು ನೀವು ಸದನದ ನಿಯಮಾವಳಿ ಪ್ರಕಾರ

ನಡೆದುಕೊಂಡಿದ್ದೇವೆಯೇ? ಹೇಳಿ. ಇದಕ್ಕೆ ನಾನು ಮತ್ತು ನೀವು ಜವಾಬ್ದಾರರು. ಪ್ರಶ್ನೋತ್ತರ ಕಾಲವನ್ನು ಒಂದು ಗಂಟೆಗೆ ಸೀಮಿತಗೊಳಿಸಿ ತಕ್ಷಣವೇ ಮುಗಿಸಿದ್ದರೆ ನಿಲುವಳಿ ಸೂಚನೆ ಚರ್ಚೆಗೆ ಬರುತ್ತಿತ್ತು. ಮಾನ್ಯ ಸದಸ್ಯರು ತುಂಬಾ ಮುಖ್ಯವಾದ ಪ್ರಶ್ನೆ ಕೇಳುತ್ತಿದ್ದಾರೆಂಬ ಉದ್ದೇಶದಿಂದ ಆ ರೀತಿ ನಾನು ಮಾಡಿದೆ. ಕೆಲವು ಸಲ ನಿಯಮಾವಳಿ ಪ್ರಕಾರ ನಡೆದುಕೊಳ್ಳುವುದಕ್ಕಾಗುವುದಿಲ್ಲ, ಸ್ವಲ್ಪ ವ್ಯತ್ಯಾಸಗಳಾಗುತ್ತವೆ. ಇದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ಅವರು ಸಂಬಂಧಪಟ್ಟ ಕ್ಷೇತ್ರದ ಶಾಸಕರಾಗಿದ್ದು, ನಿನ್ನೆ ಸಂಜೆ ಐದು ಗಂಟೆಗೆ ನನ್ನ ಮನೆಗೆ ಬಂದು ತಂದುಕೊಟ್ಟರು. ತದನಂತರ ನಿಮ್ಮದೂ ಹಾಗೂ ಇತರರ ಸೂಚನೆಗಳೂ ಬಂದವು. ಎಲ್ಲರೂ ಕೊಟ್ಟಿರುವುದನ್ನು ಒಟ್ಟಾಗಿ ಸೇರಿಸಿಕೊಂಡು ಅದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಪರಿವರ್ತಿಸಿದ್ದೇನೆ. ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದು, ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಇದಾದ ನಂತರ ತಾವು ಮಾತನಾಡಿ, ನನ್ನದೇನೂ ಆಕ್ಷೇಪಣೆಯಿಲ್ಲ. ಇವೆಲ್ಲವೂ ಮ್ಯುಚುಯಲ್ ಅಜೆಸ್ಟ್‌ಮೆಂಟ್. ನೀವೇ ಹೀಗೆ ಹೇಳಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಮುಖವಾಗಿ ಪ್ರಸ್ತಾಪಿಸುತ್ತಿರುವುದೇನೆಂದರೆ, ಕಳೆದ 2-3 ತಿಂಗಳ ಹಿಂದೆ ಇದರ ಬಗ್ಗೆ ಗೊಂದಲ, ಉದ್ರಿಕ್ತ ಹಾಗೂ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾದಾಗ ಅಲ್ಲಿನ ಜಿಲ್ಲಾಧಿಕಾರಿ ಇಲ್ಲವೇ ಎಸ್.ಪಿ.ಯವರು ಉಭಯ ಪಕ್ಷದವರನ್ನು ಆಹ್ವಾನಿಸಿ ಇದರ ಬಗ್ಗೆ ಸಂಧಾನದ ಮಾತುಕತೆ ನಡೆಸಿ ಪರಿಸ್ಥಿತಿಯನ್ನು ಒಂದು ರೀತಿಯಲ್ಲಿ ನಿಯಂತ್ರಣಕ್ಕೆ ತರುವ ಪ್ರಯತ್ನ ನಡೆದಿತ್ತು. ಆದರೆ, ಅಲ್ಲಿದ್ದ ಎಸ್.ಪಿ.ಯವರನ್ನು ಸರ್ಕಾರ ಬೇರೆಡೆಗೆ ವರ್ಗಾಯಿಸಿ, ಅಲ್ಲಿಗೆ ಹೊಸ ಎಸ್.ಪಿ.ಯವರನ್ನು ನೇಮಕ ಮಾಡಿದ ಒಂದು ವಾರದಲ್ಲಿಯೇ ಹಠಾತ್ತಾಗಿ ಏಕೆ ಈ ಘಟನೆ ಜರುಗಿತು? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಅಧಿಕಾರಿಗಳನ್ನು ಯಾವಾಗ ಬೇಕಾದರೂ ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕಿದೆ ಎಂದು ಮಾನ್ಯ ಗೃಹ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಬೇಡವೆನ್ನುವುದಿಲ್ಲ. ಅದಕ್ಕೊಂದು ಸಕಾರಣ ಇರತ್ತದಲ್ಲ. ಪ್ರತಿಯೊಂದು ಸಾಮಾನ್ಯ ವರ್ಗಾವಣೆಯು ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿಯೇ ಆಗುವಂತಾದ್ದು. ಹಿರಿಯ ಅಧಿಕಾರಿಗಳು ಈ ಸಮಯದಲ್ಲಿ ವರ್ಗಾವಣೆಯಾಗುತ್ತಿರುತ್ತಾರೆ. ಆದರೆ, ವರ್ಗಾವಣೆ ವರ್ಷದ ಮಧ್ಯದಲ್ಲಿ ನಡೆದಿದೆ. ರಾಣೆಬೆನ್ನೂರು ಮತ್ತು ಸವಣೂರಿನಲ್ಲಿ ನಡೆದಂಥ ಘಟನೆ ನರೇಗಲ್‌ನಲ್ಲೂ ಜರುಗಿದೆ. ನರೇಗಲ್‌ನಲ್ಲಿ ಇದೇ ರೀತಿಯ ಪ್ರಕ್ಷುಬ್ಧ ವಾತಾವರಣವಿದ್ದಾಗ ಅಲ್ಲಿ ಹಿಂದಿದ್ದಂಥ ಎಸ್.ಪಿ. ಯವರು ಪರಿಸ್ಥಿತಿಯನ್ನು ನಿಯಂತ್ರಿಸುವುದಕ್ಕೆ ಉಭಯ ಪಕ್ಷದವರನ್ನು ಆಹ್ವಾನಿಸಿ ಅವರೊಂದಿಗೆ ಮಾತುಕತೆ ನಡೆಸಿದ್ದರಿಂದ ಇವೊತ್ತು ಅಲ್ಲಿ ಶಾಂತಿಯ ವಾತಾವರಣ ನಿರ್ಮಾಣವಾಗಿದೆ.

3.50 ಪಿ.ಎಂ.

ನಾನೂ ಸಹ ಅಲ್ಲಿಗೆ ಹೋಗಿ ಹಿಂದಿನ ದಿವಸ ಅಲ್ಲಿನ ಎಸ್.ಪಿ. ಯವರೊಂದಿಗೆ ಮಾತನಾಡಿದ್ದೆ. ಎರಡೂ ಪಕ್ಷದವರನ್ನು ಕರೆಸಿ ಅವರು ಮಾತನಾಡಿದ ಮೇಲೆ ಶಾಂತಿ ವಾತಾವರಣ ನಿರ್ಮಾಣವಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ, ಈ ಘಟನೆ ಕಳೆದ ಮೂರು ತಿಂಗಳಿನಿಂದ ನಡೆಯುತ್ತಾ

ಬಂದಿದೆ. ಹಿಂದೆ ಒಂದು ಸಲ ಬಂದ್‌ಗೆ ಕರೆ ಕೊಟ್ಟಿದ್ದರು, ಅನಂತರ ಅದರ ಬಗ್ಗೆ ಡಿಸ್‌ಪ್ಯೂಟ್ ನಡೆಯಿತು. ಒಂದು ಮನವಿ ಪತ್ರ ಕೊಟ್ಟಿದ್ದರು, ಜಿಲ್ಲಾಧಿಕಾರಿಗಳ ಮುಂದೆ ಶಾಂತಿ ಕಾಪಾಡುವ ಸಭೆಯಾಯಿತು, ಇವೆಲ್ಲಾ ನಡೆದು ಎರಡೂ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಂತಿ ಕಾಪಾಡುವ ಕೆಲಸವನ್ನು ಮಾಡುತ್ತಿದ್ದರು. ಗೃಹ ಸಚಿವರು ನಮಗೆ ಅಧಿಕಾರವಿದೆ, ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಸೂಕ್ಷ್ಮತೆಯಿಂದ ಕೂಡಿರುವ ಏರಿಯಾದಲ್ಲಿ ಒಬ್ಬರು ಎಸ್.ಪಿ. ಯವರು ಸರಿಯಾಗಿ ಆಡಳಿತವನ್ನು ನೋಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಅವರನ್ನು ಈ ವಾರದಲ್ಲಿ ವರ್ಗಾವಣೆ ಮಾಡಿದಮೇಲೆ ಅಲ್ಲಿ ಏನು ಘಟನೆಯಾಯಿತು....

ಶ್ರೀ ಸಿ.ಆರ್. ಸಗೀರ್ ಅಹಮದ್ : ಒಬ್ಬರು ಅಧಿಕಾರಿಗೆ ಮುಂಬಡ್ತಿಯನ್ನು ನೀಡಿದಾಗ ವರ್ಗಾವಣೆಯಾಗುವುದು ಸಹಜವಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ : ವರ್ಷದ ಮಧ್ಯದಲ್ಲಿ ವರ್ಗಾವಣೆ ಮಾಡುವಂಥ ಸಂದರ್ಭವೇ ಅಲ್ಲಿ ಇರಲಿಲ್ಲ. ಈ ಸಂದರ್ಭದಲ್ಲಿ ಎಸ್.ಪಿ. ಅವರನ್ನು ವರ್ಗಾವಣೆ ಮಾಡಿರುವುದರಿಂದ ಅದು ಆಗಿದೆ. ಶಾಸಕರಾದ ಕೋಳಿವಾಡ್‌ರವರು ಘಟನೆ ಆಗಿಯೇ ಇಲ್ಲವೆಂದು ಹೇಳಿದ್ದಾರೆ. ನಾನು ಎಲ್ಲೆಲ್ಲಿ ಘಟನೆಯಾಗಿದೆ ಅಲ್ಲಿಗೆ ಮೊನ್ನೆ ದಿವಸ ಹೋಗಿ ನೋಡಿ ಬಂದಿದ್ದೇನೆ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರಿಗೆ ಕೆಲಸದ ಒತ್ತಡದಿಂದ ಅಲ್ಲಿಗೆ ಹೋಗಿ ನೋಡಲು ಸಾಧ್ಯವಾಗದಿರಬಹುದು. ಆ ಸ್ಥಳಕ್ಕೆ ಹೋಗದೆಯೇ ಶಾಸಕರಾದ ಕೋಳಿವಾಡ್‌ರವರು ಏನೂ ಘಟನೆಯಾಗಿಲ್ಲ, ಎಲ್ಲಾ ನಿಯಂತ್ರಣದಲ್ಲಿದೆಯೆಂದು ಹೇಳಿದರು. ಅದು ಅವರಿಗೇ ಮತ್ತು ಸರ್ಕಾರಕ್ಕೆ ಗೊತ್ತು. ಆದರೆ ನಾನು ನಿನ್ನೆ ಅಲ್ಲಿಗೆ ಹೋಗಿದ್ದೆ. ಅಲ್ಲಿ ಇನ್ನೂ ದ್ವೇಷಮಯವಾದ ವಾತಾವರಣವಿದೆ. ಯಾವುದೇ ಸಂದರ್ಭದಲ್ಲಿ ಜನರಲ್ಲಿ ಆಕ್ರೋಶವು ಬಿತ್ತರಗೊಳ್ಳುವ ಪರಿಸ್ಥಿತಿ ಇದೆ. ಇದನ್ನು ಕಂಟ್ರೋಲ್‌ಗೆ ತರುವ ಕೆಲಸ ಆಗಬೇಕಾಗಿದೆ. ಆ ಡಿಸ್‌ಪ್ಯೂಟೆಡ್ ಏರಿಯಾದಲ್ಲಿ ನಿಯಂತ್ರಣವನ್ನು ಕಾಪಾಡಿಕೊಂಡು ಹೋಗುವ ಕೆಲಸವಾಗಬೇಕಾಗಿದೆ. ಡಿಸ್‌ಪ್ಯೂಟೆಡ್ ಭಾಗದ ಟೈಟಲ್ ಯಾರಿಗೆ ಇದೆ ಎಂಬ ಬಗ್ಗೆ ಅನಂತರ ತೀರ್ಮಾನವಾಗಲಿ. ಇದಕ್ಕೆಲ್ಲಾ ಮುಖ್ಯವಾದ ಕಾರಣವೇನೆಂದರೆ ಈ ವಾರದಲ್ಲಿ ಹೊಸದಾಗಿ ಎಸ್.ಪಿ. ಯವರೇನು ಬಂದರು ಅವರಿಗೆ ಇದನ್ನು ಕಂಟ್ರೋಲ್ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಅಲ್ಲಿನ ಜನರು ಕ್ಷೋಭೆಯೆದ್ದು ಅವರಿಗೆ ಅನುಕೂಲವಾಗುತ್ತದೆಂದು ತಿಳಿದುಕೊಂಡು ಪ್ರಚೋದನೆ ಮಾಡಲು ಪ್ರಯತ್ನ ಮಾಡಿದರು. ಇಲ್ಲಿ ಎಸ್.ಪಿ. ಯವರ ವೈಫಲ್ಯತೆ ಎದ್ದು ಕಾಣುತ್ತದೆ. ಇಂಥ ಎಸ್.ಪಿ. ಯವರನ್ನೇ ಇಟ್ಟುಕೊಂಡರೆ ಅಲ್ಲಿ ಯಾವುದೇ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಆಗುವುದಿಲ್ಲ. ಗೋಲಿಬಾರ್ ಮಾಡಿದ್ದಾರೆ, ಆದರೆ ಯಾರಿಗೂ ತಾಗದೆ ಆಗುತ್ತಿದ್ದ ಅನಾಹುತ ತಪ್ಪಿದೆ. ಈ ಘಟನೆಯಾಗಲು ಮುಖ್ಯ ಕಾರಣಕರ್ತರು ಎಸ್.ಪಿ. ತಕ್ಷಣ ಆ ಎಸ್.ಪಿ. ಯವರನ್ನು ಅಮಾನತ್ತು ಮಾಡಿ ವಿಚಾರಣೆ ಮಾಡಿ, ಇಲ್ಲದಿದ್ದರೆ ಹಾವೇರಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ. ರಾಣೆಬೆನ್ನೂರು ಪ್ರಕ್ಷುಬ್ಧವಾದ ನಗರವಾಗುವ ಸಾಧ್ಯತೆಗಳು ಇದೆ. ಇದನ್ನು ನಿಯಂತ್ರಣ ಮಾಡಲು ತಾವು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತು ಆ ಎಸ್.ಪಿ. ಯವರನ್ನು ತಕ್ಷಣ ಅಮಾನತ್ತು ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೆ, ರಾಣೆಬೆನ್ನೂರಿನ ಘಟನೆಯಿಂದ ನಿಜವಾಗಿಯೂ ನಾವೆಲ್ಲರೂ ತಲೆತಗ್ಗಿಸಬೇಕಾಗುತ್ತದೆ. ಹಿಂದೆ ಹುಬ್ಬಳ್ಳಿಯ ಈದ್ಗಾ ಮೈದಾನದ ಪ್ರಕರಣದಲ್ಲಿ ಎಂಥ ತೊಂದರೆ ಇತ್ತು, ಆಗಸ್ಟ್ 15ರಂದು ಕರಾಳ ಪರಿಸ್ಥಿತಿಯಾಗುತ್ತಿತ್ತು ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಆ ರೀತಿ ಇವತ್ತು ರಾಣೆಬೆನ್ನೂರು ಆಗಿದೆ. ಆದರೆ ಅಲ್ಲಿನ ಶಾಸಕರು ಏನೂ ಆಗಿಲ್ಲವೆಂದು ಹೇಳಿದ್ದಾರೆ. ತಾವು ಅವರು ಸ್ಥಳಕ್ಕೆ ಭೇಟಿ ನೀಡಿದ್ದಾರೋ ಇಲ್ಲವೋ ಎಂದೇಕೆ ಸಂಶಯ ಪಡುತ್ತೀರಿ ಅವರು ಅಲ್ಲಿಗೆ ಹೋಗಿಯೇ ಇಲ್ಲ. ಅಲ್ಲಿಗೆ ಜಿಲ್ಲಾ ಉಸ್ತುವಾರಿ ಸಚಿವರೂ ಹೋಗಿಲ್ಲ. ವಿರೋಧ ಪಕ್ಷದ ನಾಯಕರು ಇತರರು ಹೋಗಿ ಬಂದಿದ್ದಾರೆ. ಆದರೆ ಸರ್ಕಾರದ ಒಬ್ಬರು ಸಚಿವರೂ ಹೋಗಿಲ್ಲ. ಅಲ್ಲಿ ಇಷ್ಟೊಂದು ದಾಂಧಲೆ ನಡೆದರು ಸಹ ಗೃಹ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಹೋಗಿಲ್ಲವೆಂದರೆ ಆಡಳಿತ ಪರಿಸ್ಥಿತಿ ಎಷ್ಟು ಕೆಟ್ಟುಹೋಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಗೃಹ ಸಚಿವರೇ ಅಲ್ಲಿಗೆ ಹೋಗಬೇಕಾಗಿತ್ತು ಎಂದು ನಾನು ಹೇಳುವುದಿಲ್ಲ, ಜಿಲ್ಲಾ ಉಸ್ತುವಾರಿ ಸಚಿವರು ಹೋಗಬೇಕಾಗಿತ್ತು. ಆ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಿಸಿರುತ್ತಾರೆ. ಅವರೂ ಕೂಡ ಹೋಗಲಿಲ್ಲ ಆ ಕಾರಣದಿಂದ ಆ ಘಟನೆ ಮತ್ತಷ್ಟು ಬೆಳೆಯಲು ಸಾಧ್ಯವಾಗಿದೆ. ಆ ಘಟನೆಯಾಗಲು ಕಾರಣಗಳೇನು ಎಂಬ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದೆ. ಅಧಿಕಾರಿಗಳು ದಾಖಲೆಯನ್ನೇ ತಿದ್ದಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಇದು ಸುಳ್ಳೋ ಅಲ್ಲವೋ ಎಂಬುದನ್ನು ಸಚಿವರು ಉತ್ತರದಲ್ಲಿ ಹೇಳಿ. ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಪತ್ರಿಕಾ ಸಂದರ್ಶನ ನಡೆಯುವಂಥ ಸಂದರ್ಭದಲ್ಲಿ ಅದನ್ನು ಹೇಳಿರುವವರು ಯಾರು ಎಂದು ಹೇಳಿ. ಪತ್ರಿಕೆಯವರು ನೇರವಾಗಿ ಬರೆದಿರುವಂಥ ವಿಚಾರವಲ್ಲ ಅದು. ದಾಖಲಾತಿಗಳು ಸರಿಯಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಜನರು ಹೇಳಿದ್ದಾರೆ. ಜಿಲ್ಲಾಧಿಕಾರಿಯವರು ಶಾಂತಿ ಸಭೆ ಕರೆದು ಯಾರ್ಯಾರನ್ನು ಕೂರಿಸಿದ್ದರು ಅವರು ಹೇಳಿದ್ದೆಲ್ಲಾ ಪತ್ರಿಕೆಯಲ್ಲಿ ಬಂದಿದೆ. ಆ ಸಭೆ ಭಂಗವಾಗಲು ಕಾರಣವೇನೆಂದರೆ ಕಂದಾಯ ಅಧಿಕಾರಿಗಳು ಆ ದಾಖಲೆಯನ್ನೇ ತಿದ್ದಿದ್ದಾರೆಂದು ಜನರು ಹೇಳಿದ್ದಾರೆ. ಇದು ಸರಿಯೋ, ತಪ್ಪೋ ಎಂಬ ಬಗ್ಗೆ ಪರಿಶೀಲನೆ ಮಾಡಿ. ಇದು ರಾಜ್ಯದಾದ್ಯಂತ ವ್ಯಾಪಿಸಬಹುದು. ಆದ್ದರಿಂದ ಹೇಳುತ್ತಿದ್ದೇನೆ. ಈ ಘಟನೆ ಏಕೆ ಕಳೆದ ಒಂದು ವರ್ಷದಿಂದ ಆಗುತ್ತಿದೆ ಎಂಬ ಬಗ್ಗೆ ವಿಚಾರ ಮಾಡಬೇಕಾಗಿದೆ. ಹಿಂದೂ ಮುಸಲ್ಮಾನ್ ಧಂಗೆಯಿಂದ ಪ್ರಾರಂಭವಾಗಿದೆಯೆಂದು ನೇರವಾಗಿ ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ಮುಂಜಾಗ್ರತೆಯ ಕ್ರಮವಾಗಿ ಎಲ್ಲೆಲ್ಲಿ ದೋಷವಿದೆ ಅದನ್ನು ಪತ್ತೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಎಲ್ಲವನ್ನು ಸರ್ಕಾರವೇ ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ರಾಣೆಬೆನ್ನೂರಿನಲ್ಲಿ ಇದರ ಹೊಗೆ ಉರಿಯುತ್ತಿದೆ. ಇದೇನು ಹೊಸದಾದುದಲ್ಲ.

(ಈ ಹಂತದಲ್ಲಿ ಮಾನ್ಯ ಕೆ. ಶ್ರೀನಿವಾಸಗೌಡರು ಪ್ರಸ್ತಾಪಿಸಿದ ವಿಷಯವನ್ನು ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ದಾಖಲಿಸಿಕೊಳ್ಳಲಿಲ್ಲ)

ರಾಜ್ಯದಲ್ಲಿ ಡಾ|| ರಾಜ್‌ಕುಮಾರ್‌ರವರ ಅಪಹರಣವಾದ ಮೇಲೆ ತಮಗೆ ಕೆಲಸದ ಒತ್ತಡ ಹೆಚ್ಚಾಗಿದೆ ತಾವು ತೊಂದರೆಯಲ್ಲಿದ್ದೀರಿ ಎಂಬುದು ನಮಗೆಲ್ಲ ಗೊತ್ತಿದೆ. ಎಲ್ಲಾ ಕಡೆ ನೀವೇ ಲಕ್ಷ್ಯ ಕೊಡಲು ಆಗುವುದಿಲ್ಲ. ಮುಖ್ಯಮಂತ್ರಿಗಳೇ ಅಥವಾ ಗೃಹ ಸಚಿವರೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಿಲ್ಲ.

ಅಧ್ಯಕ್ಷರು : ತಾವು ಎಲ್ಲೆಲ್ಲಿಗೋ ಹೋಗುತ್ತೀರಲ್ಲ, ವಿಷಯದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ : ನಾವು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಸ್ಥಳಕ್ಕೆ ಹೋಗಿಬಂದಿದ್ದರೂ ಹೋಗಿಲ್ಲವೆಂದು ಇವರುಗಳು ಬೈದಿದ್ದಾರೆ. ಆದರೆ ಇವರು ಸ್ಥಳಕ್ಕೆ ಹೋಗಿಯೇ ಇಲ್ಲ. ಹೋಗಿದ್ದರೆ ಹೋಗಿದ್ದೇನೆಂದು ಹೇಳಿ. ಇವರು ಹೋಗುವುದರಲ್ಲಿ ಮತ್ತೊಂದು ಘಟನೆಯಾಗಿದೆ. ಘಟನೆಯಾದ ಪ್ರಾರಂಭದಲ್ಲೇ ಇವರು ಹೋಗಿ, ಪರಿಶೀಲನೆ ಮಾಡಿದ್ದರೆ ಗೋಲಿಬಾರ್ ಮಾಡುವ ಪ್ರಸಂಗ ಬರುತ್ತಿರಲಿಲ್ಲ ಯಾರಾದರೂ ಸಚಿವರು ಶಾಸಕರು ಹೋಗಿ ಸಮಾಧಾನವನ್ನು ಹೇಳಿ ಬಂದಿದ್ದರೆ ಇದು ಆಗುತ್ತಿರಲಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಮಧ್ಯಸ್ಥಿಕೆವಹಿಸಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಪಿಪಿಎಸ್ ನಂ. 1981 ಎ-2ರಲ್ಲಿ 4 ಎಕರೆ 1 ಗುಂಟೆ ಜಮೀನು ಇದ್ದು ಸದರಿ ಜಮೀನಿನ ಮೇಲೆ ಹಿಂದೂ ಜಾಗರಣಾ ವೇದಿಕೆ ಹಾಗೂ ಅಂಜೂಮಾನ್ ಇಸ್ಲಾಂ ಸಂಸ್ಥೆಗಳು ಹಕ್ಕು ಕೋರಿ ಅದು ವಿವಾದದ ಸ್ಥಳವಾಗಿತ್ತು. ಈ ಸ್ಥಳದಲ್ಲಿ ಹಿಂದೆ ಅಂಜುಮಾನ್ ಇಸ್ಲಾಂ ಸಂಸ್ಥೆಯವರು ಖಬರಸ್ಥಾನಕ್ಕಾಗಿ ಧಾರವಾಡ ಜಿಲ್ಲಾಧಿಕಾರಿಗಳು ಮಂಜೂರು ಮಾಡಿದ್ದನ್ನು ಉಲ್ಲೇಖಿಸಿ, ಸದರಿ ಆದೇಶದ ವಿರುದ್ಧ ಸಾರ್ವಜನಿಕ ಹಿತರಕ್ಷಣಾ ಸಮಿತಿಯವರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದರು. ನ್ಯಾಯಾಲಯವು ಈ ಕುರಿತು ಅಂತಿಮ ಆದೇಶ ನೀಡಿರುತ್ತದೆ. ಸದರಿ ಸ್ಥಳದಲ್ಲಿ ದಿನಾಂಕ 11.11.2000ರಂದು ಸಾಯಂಕಾಲ 7 ಗಂಟೆಗೆ ಸುಮಾರು 300 ಜನ ಮುಸ್ಲಿಂ ಯುವಕರು ಈ ಸ್ಥಳದಲ್ಲಿ ವಿದ್ಯುತ್ ದೀಪ ಹಾಕಿ ಪ್ರಾರ್ಥನೆ ಮಾಡಲು ಸಿದ್ಧತೆ ನಡೆಸಿದ್ದಾಗ ವಿವಾದಿತ ಸ್ಥಳದಲ್ಲಿ ಇಂತಹ ಕಾರ್ಯಕ್ರಮ ನಡೆಸಿ ಕಾನೂನು ಉಲ್ಲಂಘನೆ ಮಾಡಬಾರದೆಂದು ಪೋಲೀಸರು ತಡೆದಿರುತ್ತಾರೆ. ಅದೇ ಸಮಯಕ್ಕೆ ಸದರಿ ಜಾಗಕ್ಕೆ ಆಗಮಿಸಿದ ಭಾರತೀಯ ಜನತಾ ಪಕ್ಷದ ಭಜರಂಗ ದಳ ಹಾಗೂ ಹಿಂದೂ ಜಾಗರಣಾ ವೇದಿಕೆಯ ಸುಮಾರು 60 ಜನ ಕಾರ್ಯಕರ್ತರು ವಿವಾದಿತ ಸ್ಥಳದಲ್ಲಿ ಪ್ರಾರ್ಥನೆ ನಡೆಸುವುದನ್ನು ವಿರೋಧಿಸಿದಾಗ ಎರಡೂ ಗುಂಪುಗಳ ನಡುವೆ ಪರಸ್ಪರ ವಾದ ವಿವಾದ ನಡೆದು ಕಲ್ಲು ತೂರಾಟ ನಡೆಸಿದಾಗ ಪರಿಸ್ಥಿತಿ ಉದ್ರೇಕಗೊಂಡಿತ್ತು. ಸ್ಥಳದಲ್ಲಿ ಇದ್ದ ಪೋಲೀಸ್ ಸಿಬ್ಬಂದಿಯು ಶಾಂತಿ ಮತ್ತು ಕಾನೂನು ಪಾಲನೆಯಲ್ಲಿ ತೊಡಗಿದ್ದಾಗ ಅವರಿಗೆ ಗಾಯಗಳಾಗಿರುತ್ತವೆ. ಪರಿಸ್ಥಿತಿ ನಿಯಂತ್ರಿಸಿ ಲಘು ಲಾಠಿ ಪ್ರಹಾರ ಮಾಡಿದಾಗಲೂ ಹತೋಟಿಗೆ ಬರದಿದ್ದಾಗ ಅಶ್ರುವಾಯು ಸೆಲ್ ಅನ್ನು ಸಿಡಿಸಿರುತ್ತಾರೆ. ಈ ಕ್ರಮದಿಂದಲೂ ಜನರ ಗುಂಪು ಘರ್ಷಣೆ ಮುಂದುವರೆದಾಗ ಪೋಲೀಸರು ಗಾಳಿಯಲ್ಲಿ ಎರಡು ಸುತ್ತು ಗುಂಡು ಹಾರಿಸಿ ದುಷ್ಕೃತ್ಯಗಳಲ್ಲಿ ತೊಡಗಿದ್ದ ಎರಡೂ ಗುಂಪುಗಳನ್ನು ಚದುರಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಗಿದೆ. ಇದರಿಂದ ಸಾರ್ವಜನಿಕರಿಗೆ ಪ್ರಾಣ ಹಾನಿಯಾಗಲೀ ಅಥವಾ ಗಾಯಗಳಾಗಲೀ ಆಗಿರುವುದಿಲ್ಲ. ಸದರಿ ಸ್ಥಳದಿಂದ ಚದುರಿ ಹೋದ ಗುಂಪುಗಳು ಮೂರು

ಸಣ್ಣ ಪೆಟ್ಟಿಗೆ ಅಂಗಡಿಗಳಿಗೆ ಬೆಂಕಿ ಹಚ್ಚಿ ನಂತರ ಒಂದು ಮೋಟಾರು ಸೈಕಲ್ ವಾಹನವನ್ನು ಸುಟ್ಟು ಹಾಕಿರುತ್ತಾರೆ. ಒಂದು ಕೆ.ಎಸ್.ಆರ್.ಟಿ.ಸಿ ವಾಹನಕ್ಕೆ ಕಲ್ಲು ತೂರಿರುತ್ತಾರೆ. ಈ ಗಲಭೆ ಪ್ರಕರಣದಲ್ಲಿ 14 ಜನರನ್ನು ಬಂಧಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಗಲಭೆ ಪೀಡಿತ ಪ್ರದೇಶದಲ್ಲಿ ಕಲಂ 144ರನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ದಿನಾಂಕ 12.11.2000ರಂದು ಶಾಂತಿ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ವಿಷಯದ ಬಗ್ಗೆ ಚರ್ಚಿಸಲಾಗಿದೆ. ಈ ವಿವಾದದ ಬಗ್ಗೆ ಪರಿಹಾರವನ್ನು ಕಂಡು ಹಿಡಿಯಲು ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ದಿನಾಂಕ 12.11.2000ರಂದು ಕೆಲವು ದುಷ್ಕರ್ಮಿಗಳು ಕಲ್ಲು ತೂರಾಟದಲ್ಲಿ ತೊಡಗಿದ್ದಾರೆ ಎಂಬ ಸೂಚನೆ ಬಂದ ಕೂಡಲೇ ಪೋಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಯಲ್ಲಿ ತರಲು ಸೂಕ್ತ ಕ್ರಮ ತೆಗೆದುಕೊಂಡಿರುತ್ತಾರೆ. ಹಾಗೂ ಈ ವಿಷಯದಲ್ಲಿ 8 ಜನರನ್ನು ಬಂಧಿಸಲಾಗಿರುತ್ತದೆ. ಪರಿಸ್ಥಿತಿ ಈಗ ಶಾಂತ ರೀತಿಯಲ್ಲಿದೆ ಮತ್ತು ಹತೋಟಿಯಲ್ಲಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಎಸ್.ಪಿ.ಯವರನ್ನು ತರಾತುರಿಯಲ್ಲಿ ಟ್ರಾನ್ಸ್ಫರ್ ಮಾಡಿದ್ದೇವೆ, ಅವರನ್ನು ಏಕೆ ಟ್ರಾನ್ಸ್ಫರ್ ಮಾಡಿದರೋ ಗೊತ್ತಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಹಾವೇರಿಯಲ್ಲಿ ಎಸ್ಪಿಯವರಾಗಿದ್ದ ಗಗನ್‌ದೀಪ್ ಅವರು ಎಸ್ಪಿಯಿಂದ ಡಿ.ಐ.ಜಿ.ಯಿಂದ ಪ್ರಮೋಷನ್ ಆದರು. ಪ್ರಮೋಷನ್ ಆಗಿದ್ದರಿಂದ ತೆರವಾದ ಜಾಗವನ್ನು ಹಾಗೆಯೇ ಖಾಲಿ ಬಿಡುವುದಕ್ಕಾಗುತ್ತದೆಯೇ? ಅದನ್ನು ನಾವು ಮೊನ್ನೆ ಭರ್ತಿ ಮಾಡಿದ್ದೇವೆ. ಒಬ್ಬರು ಇಲ್ಲಿ ಇದ್ದಂತಹ ಡಿ.ಸಿ.ಪಿ.ಯವರಿಗೆ ನಾವು ಅಲ್ಲಿಗೆ ಪೋಸ್ಟಿಂಗ್ಸ್ ಕೊಟ್ಟಿದ್ದೇವೆ. ಅವರು ಅಲ್ಪಸಂಖ್ಯಾತರಾಗಿದ್ದಾರೆ. ಅವರು ಅಲ್ಲಿಗೆ ಹೋಗಿ ಇನ್ನೂ 8 ದಿವಸ ಆಗಿಲ್ಲ. ಅವರು ಅಲ್ಪಸಂಖ್ಯಾತರಾಗಿರುವುದರಿಂದ, ಅವರನ್ನು ನೀವು ಅಲ್ಲಿಗೆ ಏಕೆ ಪೋಸ್ಟಿಂಗ್ ಮಾಡಿದಿರಿ, ಅವರು ಹೋದ ಮೇಲೆ ಅಲ್ಲಿ ಗಲಭೆ ಶುರುವಾಯಿತು ಎಂದು ಹೇಳಿದರೆ ಹೇಗೆ.....

(ಗೊಂದಲ)

ಒಬ್ಬ ಅಧಿಕಾರಿ ಮುಂಜಾಗ್ರತೆಯಿಂದ ಕ್ರಮವನ್ನು ಜರುಗಿಸಿ ಒಬ್ಬರಿಗೂ ತೊಂದರೆಯಾಗದ ರೀತಿಯಲ್ಲಿ ನಡೆದುಕೊಂಡಿದ್ದಕ್ಕಾಗಿ ಅವನನ್ನು ನಾವು ಸಸ್ಪೆಂಡ್ ಮಾಡಬೇಕೇ? ಅಲ್ಲಿ ಶಾಂತಿಯನ್ನು ಮೂಡಿಸಿದ್ದಕ್ಕಾಗಿ ನಾವು ಅವನನ್ನು ಸಸ್ಪೆಂಡ್ ಮಾಡಬೇಕೇ? ಅವರು ಒಳ್ಳೆಯ ರೀತಿಯಿಂದ ಅಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಶಾಂತಿ ಸಭೆಯೊಂದನ್ನು ನಡೆಸಿ ಈ ವಿಷಯವನ್ನು ಅಲ್ಲಿಗೇ ಮುಕ್ತಾಯಗೊಳಿಸಬೇಕೆಂದು ಪ್ರಯತ್ನ ಮಾಡಿದವರನ್ನು ಸಸ್ಪೆಂಡ್ ಮಾಡಬೇಕೇ? ನನಗೇನೂ ತಿಳಿಯುತ್ತಿಲ್ಲ. ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಅದರ ಬಗ್ಗೆ ಇದ್ದ ಕೇಸ್ ಕೂಡ ಡಿಸೈಡ್ ಆಗಿದೆ ಎಂಬ ಮಾಹಿತಿ ಬಂದಿದೆ. ಅದಾದ ಮೇಲೂ ಕೂಡ ನೀವು ಹೇಳಿದಂತೆ ಶಾಪಿಂಗ್ ಕಾಂಪ್ಲೆಕ್ಸ್ ಬಗ್ಗೆಯೂ ಸಹಾ ನಾನು ಹೇಳಿದೆ. ಅಲ್ಲಿ ಏನು ನಡೆದಿತ್ತು? ಏನು ಇಲ್ಲ ಎಂಬ ವಿಚಾರ ನಾನು ಹೇಳಿದ್ದೇನೆ. ಜಿಲ್ಲಾಧಿಕಾರಿಗಳು ಇದನ್ನು ಬಗೆಹರಿಸುತ್ತೇನೆಂದು ಭರವಸೆ ಕೊಟ್ಟ ಮೇಲೆ, ಈಗ ಪರಿಸ್ಥಿತಿ ಅಲ್ಲಿ ಶಾಂತವಿದ್ದ ಮೇಲೆ ನಾವು ಪುನಃ ಅದೇ ವಿಷಯವನ್ನು ಚರ್ಚೆ ಮಾಡಿ, ನಾವಾಗಿಯೇ ಎರಡೂ ಕೋಮಿನ ಜನರಿಗೆ ಎಬ್ಬಿಸಿ ಕೂಡಿಸತಕ್ಕಂಥ ಪ್ರಯತ್ನ ನಾವು ಮಾಡಬಾರದು.

ಎಂದು ನಾನು ಅಪೀಲ್ ಮಾಡುತ್ತೇನೆ. ಇವತ್ತು ಅಲ್ಲಿ ಶಾಂತ ಪರಿಸ್ಥಿತಿ ಇದೆ. ಮಾನ್ಯ ಕೋಳಿವಾಡ್‌ನವರು ಅಲ್ಲಿಯ ಸ್ಥಳೀಯ ಶಾಸಕರಾಗಿದ್ದಾರೆ. ಅವರಿಗೆ ನೋವು ಇದ್ದಷ್ಟು ಬಹುಶಃ ಬೇರೆ ಭಾಗದಿಂದ ಬಂದಂತಹ ಶಾಸಕರಿಗೆ ಇರುವುದಿಲ್ಲ ಮತ್ತು ಕಾಳಜಿ ಕೂಡ ಅವರಷ್ಟು ಇರುವುದಿಲ್ಲ. ಮಾನ್ಯ ಶಾಸಕರೂ ಕೂಡ ಇದರ ಬಗ್ಗೆ ಚಿಂತನೆ ಮಾಡಿದ್ದಾರೆ ಮತ್ತು ತಿಳಿದುಕೊಂಡಿದ್ದಾರೆ. ಅನೇಕ ಸಾರಿ ಅವರನ್ನು ಟೆಲಿಫೋನ್ ಮುಖಾಂತರ ಸಂಪರ್ಕ ಮಾಡಿಕೊಂಡು ಈ ಮಾತನ್ನು ಹೇಳಿದ್ದಾರೆ. ನಿಮಗೆ ಹೇಗೆ ಗೊತ್ತಾಯಿತು? ನೀವೇನು ಅಲ್ಲಿಗೆ ಹೋಗಿದ್ದಿರಾ? ಎಂದು ಕೆಲವು ಮಾನ್ಯ ಸದಸ್ಯರು ಕೇಳಿದರು. ಅನೇಕ ಸಾರಿ ಕೆಲವು ಸಲ ಹೋಗದೇ ಇದ್ದರೂ ಕೂಡ, ಅವರು 4-5 ಸಲ ಆ ಭಾಗದಿಂದ ಚುನಾಯಿತರಾಗಿ ಸದಸ್ಯರಾಗಿ ಇಲ್ಲಿಗೆ ಬಂದ ಮೇಲೆ ಅವರಿಗೇನು ಸಂಪರ್ಕ ಇರುವುದಿಲ್ಲವೇ? ಇವತ್ತು ಅಲ್ಲಿ ಶಾಂತ ವಾತಾವರಣ ಇದೆ. ಅದಕ್ಕೆ ನಾವು ಯಾರೂ ಕೂಡ ಪ್ರಚೋದನೆ ಮಾಡತಕ್ಕದ್ದು ಬೇಡ. ನಾವು ಈ ವಿಷಯವನ್ನು ಇಲ್ಲಿಗೇ ಬಿಟ್ಟು ಬಿಡೋಣ. ಜಿಲ್ಲಾಧಿಕಾರಿಯವರು ಅದನ್ನು ಬಗೆಹರಿಸತಕ್ಕಂಥ ಎಲ್ಲಾ ಪ್ರಯತ್ನಗಳನ್ನೂ ಕೂಡ ಮಾಡುತ್ತಿದ್ದಾರೆ. ಇವತ್ತು ಅಲ್ಲಿ ಯಾವುದೇ ಪ್ರಕ್ಷುಬ್ಧ ವಾತಾವರಣ ಇಲ್ಲ, ಅಲ್ಲಿ ಶಾಂತ ವಾತಾವರಣ ಇದೆ. ಇಲ್ಲಿಗೆ ಈ ವಿಷಯವನ್ನು ನಾವು ಮುಕ್ತಾಯಗೊಳಿಸೋಣ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ಒಂದು ಪಕ್ಷ ಅಥವಾ ಪಂಗಡದ ಹೆಸರು ಹೇಳಲಿಲ್ಲ. ಆದರೆ ಮಾನ್ಯ ಖಿರ್ಗೆಯವರು ಇವತ್ತು ಸದನದಲ್ಲಿ, ಭಾರತೀಯ ಜನತಾ ಪಾರ್ಟಿ ಕಾರ್ಯಕರ್ತರು ಅಲ್ಲಿಗೆ ಹೋದರು, ಅವರು ಪ್ರಚೋದನೆ ಮಾಡಿದರು, ಅಲ್ಲಿ ಘರ್ಷಣೆ ಮಾಡಿದರು ಎಂದು ಹೇಳಿದರು. ಅಂದರೆ ಇವರು ಇವತ್ತು ಇದನ್ನು ರಾಜಕೀಯ ಮಾಡಲಿಕ್ಕೆ ಹೊರಟಿದ್ದಾರೆ. ನಾನು ಯಾರ ಹೆಸರನ್ನೂ ಕೂಡ ಹೇಳದೇ ಸೂಕ್ಷ್ಮವಾಗಿ ವಿಷಯವನ್ನು ಪ್ರಸ್ತಾಪಿಸಿದ್ದೆ. ಆದರೆ ಜವಾಬ್ದಾರಿ ಇರುವಂತಹ ಮಾನ್ಯ ಗೃಹ ಸಚಿವರು ಭಾರತೀಯ ಜನತಾ ಪಾರ್ಟಿಯವರು ಅಲ್ಲಿಗೆ ಹೋಗಿದ್ದಾರೆ, ಘರ್ಷಣೆ ಮಾಡಿದ್ದಾರೆ ಎಂದರೆ ಹೇಗೆ? ಇವತ್ತು ಇಲ್ಲಿ ಇಡೀ ಊರು ಸಾರ್ವಜನಿಕ ಜಾಗರಣಾ ವೇದಿಕೆ ಅಂತ ಮಾಡಿಕೊಂಡು ಆ ಜಾಗವನ್ನು ಉಳಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಹೋರಾಟ ಮಾಡುತ್ತಿದ್ದರೆ, ಆ ಜಾಗ ವಿವಾದಿತವಾಗಿದ್ದ ಸಂದರ್ಭದಲ್ಲಿ, ಈ ಎಸ್ಪಿ ಆ ಜಾಗಕ್ಕೆ ಹೋಗಲಿಕ್ಕೆ ಏಕೆ ಬಿಟ್ಟ? ಸರ್ಕಾರದ ಇಂಟಲ್‌ಜೆನ್ಸಿ ಏನು ಮಾಡುತ್ತಿತ್ತು? ಅದು ಅವರ ನಿರ್ಲಕ್ಷ್ಯತನ ತೋರಿಸಿದೆ. ಹಿಂದೆ ಮೂರು ತಿಂಗಳಿಂದಲೂ ಇದು ನಡೆಯುತ್ತಿದೆ. ಆಗ ಇಂತಹ ಘಟನೆ ಏನೂ ಆಗಿರಲಿಲ್ಲ. ಆ ಮೂರು ತಿಂಗಳಿನಲ್ಲಿ ಎಲ್ಲಾ ಶಾಂತಿ ಇತ್ತಲ್ಲವೇ? ಅವರೂ ಸುಮ್ಮನೆ ಕುಳಿತಿದ್ದರು, ಇವರೂ ಸುಮ್ಮನೆ ಕುಳಿತಿದ್ದರು, ಯಥಾಸ್ಥಿತಿ ಕಾಯ್ದುಕೊಂಡು ಹೋಗಿದ್ದರು, ಹಾಗಾದರೆ ಈ ಎಸ್ಪಿ ಬಂದ 4 ದಿವಸದಲ್ಲೇ ಈ ಘಟನೆ ಏಕೆ ಆಯಿತು? ಆ ಜಾಗಕ್ಕೆ ಹೋಗಲಿಕ್ಕೆ ಏಕೆ ಬಿಟ್ಟರು? ಇದು ಎಸ್ಪಿ ತಪ್ಪಲ್ಲವೇ? ಅವನ ನಿರ್ಲಕ್ಷ್ಯವಲ್ಲವೇ? ಇವನ ಇಂಟಲ್‌ಜೆನ್ಸಿ ಏನು ಕೆಲಸ ಮಾಡುತ್ತಿತ್ತು? ಇಲ್ಲಿ ಎಸ್ಪಿ ತನ್ನ ಕರ್ತವ್ಯದಲ್ಲಿ ವೈಫಲ್ಯನಾಗಿದ್ದಾನೆ. ನಾವು ಅವನು ಯಾವ ಕೋಮು ಎಂದು ಹೇಳಲಿಲ್ಲ. ಆದರೆ ಮಾನ್ಯ ಗೃಹ ಸಚಿವರೇ ಇವನು ಅಲ್ಪಸಂಖ್ಯಾತ ಕೋಮಿಗೆ ಸೇರಿದವನು ಎಂದು ಎತ್ತಿ ಹೇಳುತ್ತಿದ್ದಾರೆ. ಅಂದರೆ ಇದರಲ್ಲಿ ರಾಜಕೀಯ ಮಾಡಲಿಕ್ಕೆ ಇವರು ಹೊರಟಿದ್ದಾರೆ. ನಾವು ಹೊರಟಿಲ್ಲ, ಆ ಎಸ್ಪಿ ಅಧಿಕಾರ ವಹಿಸಿಕೊಂಡ 4 ದಿವಸದೊಳಗಾಗಿಯೇ ಇಷ್ಟೊಂದು ಗಲಾಟೆ ಮಾಡಲಿಕ್ಕೆ ಅನುವು ಮಾಡಿಕೊಟ್ಟಿದ್ದಾನೆ. ಆತ ಗಲಾಟೆಗೆ ಪ್ರಚೋದನೆ ಮಾಡಿದ.

ಅವನ ಹಿನ್ನೆಲೆಯೂ ಕೂಡ ನಿಮಗೆಲ್ಲಾ ಗೊತ್ತಿದೆ. ಅದನ್ನೆಲ್ಲಾ ಬಹಳ ವಿವರವಾಗಿ ಇಲ್ಲಿ ಹೇಳುವಂತ ಅಗತ್ಯವಿಲ್ಲ. ಕೋರ್ಟ್ ಕಛೇರಿಗಳಲ್ಲಿ ವಿವಾದಿತ ಸ್ಥಳದ ಬಗ್ಗೆ ಪ್ರಕರಣದ ವಿಚಾರಣೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ಅದರ ನಿರ್ಣಯ ಆಗುವವರೆಗೆ, ಡಿ.ಸಿ.ಯವರು ನಿರ್ಣಯವನ್ನು ಕೊಡುತ್ತೇನೆ ಅಲ್ಲಿಯವರೆಗೆ ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕು ಎಂದು ಸೂಚನೆ ಕೊಟ್ಟಂತಹ ಸಂದರ್ಭದಲ್ಲೂ ಸಹಿತ ಈ ಎಸ್ಪಿ ಬಂದ ಮೇಲೆ ಅಲ್ಲಿ ಗಲಾಟೆ ಮಾಡಲು ಪ್ರಚೋದನೆ ಕೊಟ್ಟು, ಒಂದು ಕೋಮಿನವರನ್ನು ಎಬ್ಬಿಸಿ ಇವತ್ತು ಅಲ್ಲಿ ಗೊಂದಲ ಆಗಲಿಕ್ಕೆ ಗಲಾಟೆ ಮಾಡಲಿಕ್ಕೆ ಕಾರಣೀಭೂತನಾಗಿದ್ದಾನೆ. ಈ ದಿಸೆಯಲ್ಲಿ ಎಸ್ಪಿ ನಿರ್ಲಕ್ಷ್ಯತನ ತೋರಿದ್ದಾರೆ. ಆ ವೈಫಲ್ಯದ ಆಧಾರದ ಮೇಲೆ ಆ ಎಸ್ಪಿಯನ್ನು ತಕ್ಷಣ ಸಸ್ಪೆಂಡ್ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಗೃಹ ಸಚಿವರು ಈ ವಿಷಯದಲ್ಲಿ ರಾಜಕೀಯ ಬೆರೆಸಬಾರದು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಅಧ್ಯಕ್ಷರು : ಅಲ್ಲಿಯ ಪರಿಸ್ಥಿತಿ ಈಗ ಕಾಮ್ ಆಗಿದೆ, ಇಲ್ಲಿ ನಾವು ಕಾಮ್ ಆಗಿ ಇರೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಒಬ್ಬ ಸಚಿವರೂ ಅಲ್ಲಿಗೆ ಹೋಗಿಲ್ಲ, ಶಾಸಕರೂ ಹೋಗಿಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಇಲ್ಲಿದ್ದಾರೆ. ಅಧಿಕಾರಿಗಳು ಕೊಟ್ಟ ರಿಪೋರ್ಟ್ ಮೇಲೆ ಇವರು ಸುಮ್ಮನೆ ಕೂತಿದ್ದಾರೆ. ಅಲ್ಲಿ ಏನು ನಡೆಯುತ್ತಿದೆ ಇವರಿಗೇ ಗೊತ್ತಿಲ್ಲ. ಅದು ಯಾವ ರಿಪೋರ್ಟ್ ಬರುತ್ತಿದೆ ಎಂದು ತಾವು ನೋಡಿ. ಎಸ್.ಪಿಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಸ್.ಪಿ.ಯ ಕರ್ತವ್ಯದಲ್ಲಿ ವೈಫಲ್ಯ ಆಗಿದೆ, ರಾಣೆಬೆನ್ನೂರಿನಲ್ಲಿ ಬೂದಿ ಮುಚ್ಚಿದ ಕೆಂಡದಂತಹ ಪರಿಸ್ಥಿತಿ ಉದ್ಭವವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಹಳ ಗಂಭೀರವಾದ ವಿಷಯ. ನಾವು ರಚನಾತ್ಮಕವಾದ ಸಂದೇಶವನ್ನು ಕಳುಹಿಸಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಪ್ರಕ್ಷುಬ್ಧವಾದ ವಾತಾವರಣ ಇದೆ, ಯಾರೂ ವಿಸಿಟ್ ಮಾಡುವುದಕ್ಕೆ ಹೋಗಲಿಲ್ಲ, ಎಸ್ಪಿಯವರು ಪರಿಸ್ಥಿತಿಯನ್ನು ನಿರ್ಲಕ್ಷ್ಯ ಮಾಡಿದ್ದರೂ ಸರ್ಕಾರದವರು ಮೌನವಹಿಸಿದ್ದಾರೆ. ಸರ್ಕಾರ ಇದಕ್ಕೆ ಇಂಬು ಕೊಡುತ್ತಿದೆ. ಈ ವ್ಯವಸ್ಥೆಯ ವಿರುದ್ಧ ನಾನು ಮತ್ತು ನನ್ನ ಪಕ್ಷದ ಸದಸ್ಯರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

## ಗಮನ ಸೆಳೆಯುವ ಸೂಚನೆ

### ಮಹಾನಗರ ಪಾಲಿಕೆಗಳ ನೌಕರರನ್ನು ವರ್ಗಾಯಿಸುವ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುವುದು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ಮಹಾನಗರ ಪಾಲಿಕೆಗಳ